(SRI T. CHANNIAH.)

(*d*) Three compounders and five midwives were posted from time to time.

ಶ್ರೀ ಎಂ. ಚಿಕ್ಕಲಿಂಗಯ್ಯ.—ನಾಲ್ಕು ಜನ ಡಾಕ್ಟರುಗಳನ್ನು ಅಲ್ಲಿಗೆ ನೇಮಕ ಮಾಡಲಾಯಿತೆಂದು ಉತ್ತರದಲ್ಲಿ ತಿಳಿಸಲಾಗಿದೆ; ಆ ನಾಲ್ಕು ಜನರ ಪೈಕಿ ಒಬ್ಬೊಬ್ಬರು ಎಷ್ಟೆಷ್ಟು ವರ್ಷ ಅಲ್ಲಿದ್ದರೆಂಬುದನ್ನು ಹೇಳುತ್ತೀರಾ ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಎಂ. ಚಿಕ್ಕಲಿಂಗಯ್ಯ.—ಬೆಲ್ಲೇನಹಳ್ಳಿ, ಮಲೇರಿಯಾ ಸ್ಥಳವೆಂದು ತಾನೇ ಅಲ್ಲಿಗೆ ಆಸ್ಪತ್ರೆಯನ್ನು ಕೊಟ್ಟಿದ್ದು ? ಹೀಗಿರುವಾಗ ಅಲ್ಲಿ ಡಾಕ್ಟರುಗಳೇ ಇಲ್ಲದಿದ್ದರೆ ಜನರಿಗೆ ಕಷ್ಟವಾಗುವುದಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ಅದೊಂದೇ ಕಾರಣದ ಮೇಲಲ್ಲ, ಬೇರೆ ಕಾರಣಗಳಿಗಾಗಿಯೂ ಕೊಟ್ಟದ್ದು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅಲ್ಲಿಯ ವಿಚಾರವಾಗಿ ಸರ್ಕಾರಕ್ಕೆ ವರದಿ ಬಂದಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಎಂ. ಚಿಕ್ಕಲಿಂಗಯ್ಯ.—ಆ ಆಸ್ಪತ್ರೆಯಲ್ಲಿ ಡಾಕ್ಟರಿಲ್ಲದೆ ಜವಾನರೇ ಡಾಕ್ಟರ ಕೆಲಸ ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ!

ಶ್ರೀ ಟಿ. ಚನ್ನಯ್ಯ.—ಇಲ್ಲ.

Combined Dispensary for Hiriyur Taluk.

Q.—236. **Sri V. MASIYAPPA** (Hiriyur).—

Will the Government be pleased to state:—

(*a*) if the people of Hiriyur Taluk have asked for a Combined Dispensary for Hiriyur Town;

(*b*) if the Government have sanctioned the same?

A.—**Sri T. CHANNIAH** (Minister for Public Health and Local Self-Government).—

(*a*) Yes.

(*b*) Under the consideration of Government.

ಶ್ರೀ ವಿ. ಮಸಿಯಪ್ಪ.—ಮಾನ್ಯ ಆರೋಗ್ಯ ಸಚಿವರೂ ಇತರ ಎಲ್ಲಾ ಸಚಿವರೂ ಹಿರಿಯೂರಿಗೆ ಬಂದ ಸಂದರ್ಭದಲ್ಲಿ ಅಲ್ಲಿನ ಮುನಿಸಿಪಾಲಟಿಯವರು ಅಲ್ಲಿಗೆ ಲೇಡಿ ಡಾಕ್ಟರನ್ನು ಕೊಟ್ಟರೆ ಅವರಿಗೆ ಕಟ್ಟಡವನ್ನು ಕೊಡುವುದಕ್ಕೆ ಸಿದ್ಧರಾಗಿರುವುದಾಗಿ ಹೇಳಲಲ್ಲವೆ ?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ವಿ. ಮಸಿಯಪ್ಪ.—ಮುನಿಸಿಪಾಲಟಿಯವರು ಲೇಡಿ ಡಾಕ್ಟರು ವಾಸಮಾಡುವುದಕ್ಕೆ ಸಾಕಾಗುವಷ್ಟು ಕಟ್ಟಡವನ್ನು ಒದಗಿಸಲು ಏರ್ಪಾಡು ಮಾಡುತ್ತೇವೆಂದು ನಿರ್ಣಯವಾಡಿ ಕಳುಹಿಸಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ನಿರ್ಣಯ ಬಂದಿದೆ, ಆದರೆ ಕಟ್ಟಡವನ್ನು ಕೊಟ್ಟಿಲ್ಲ.

ಶ್ರೀ ವಿ. ಮಸಿಯಪ್ಪ.—ತಕ್ಷಣ ಕಳುಹಿಸಿದರೂ ಅವರಿಗೆ ಜಾಗ ಕೊಡುತ್ತೇವೆಂದು ಹೇಳಿದಮೇಲೆ ಡೈರೆಕ್ಟರವರು ಅಲ್ಲಿಗೆ ಬಂದು ಸ್ಥಳವನ್ನು ನೋಡಿ, ಅದು ತೃಪ್ತಿಕರವಾಗಿದೆ, ಅಲ್ಲಿಗೆ ಕೊಡಬಹುದೆಂದು ಹೇಳಿ ಆ ರೀತಿ ಶಿಫಾರಸು ಸರ್ಕಾರಕ್ಕೆ ಮಾಡಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ಕಟ್ಟಡ ದೊರಕಿಲ್ಲವೆಂದು ವರದಿ ಮಾಡಿದ್ದಾರೆ.

ಶ್ರೀ ವಿ. ಮಸಿಯಪ್ಪ.—ಮುಂದೆ ಹೊಸದಾಗಿ ಕಟ್ಟಡ ಕಟ್ಟುವುದಕ್ಕೆ ಬೇರೆ ಏರ್ಪಾಡಿದೆ, ಈಗ ತಕ್ಷಣ ಬೇರೆ ಕಟ್ಟಡ ಕೊಡುವುದಕ್ಕೆ ಏರ್ಪಾಡಿದೆ, ಆದುದರಿಂದ ಒಬ್ಬರು ಲೇಡಿ ಡಾಕ್ಟರನ್ನು ಕಳುಹಿಸಿಕೊಡಬೇಕೆಂದು ಕೇಳಲಲ್ಲವೆ ?

ಶ್ರೀ ಟಿ. ಚನ್ನಯ್ಯ.—ಇಲ್ಲ.

Mr. SPEAKER.—It is stated that it is under consideration.

ಶ್ರೀ ವಿ. ಮಸಿಯಪ್ಪ.—ಈಗಲಾದರೂ ಜಾಗ್ರತೆ ಕಳುಹಿಸಲು ಏರ್ಪಾಡು ಮಾಡುತ್ತೀರಾ ?

Mr. SPEAKER.—It is only a request.

ಶ್ರೀ ಟಿ. ಚನ್ನಯ್ಯ.—ಇಲಾಖೆಯಿಂದ ವರದಿ ತರಿಸಿ ನೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ವಿ. ಮಸಿಯಪ್ಪ.—ಅದು ಮಲೇರಿಯಾ ಸ್ಥಳವಾದುದರಿಂದ ಹೆಣ್ಣುಮಕ್ಕಳು ಹೆರಿಗೆ ಕಾಲದಲ್ಲಿ ತೊಂದರೆಯನ್ನನುಭವಿಸುತ್ತಾರೆಂದು ಸರ್ಕಾರದ ಗಮನಕ್ಕೆ ಪದೇ ಪದೇ ತಂದಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ತಂದಿದ್ದಾರೆ.

ಶ್ರೀ ವಿ. ಮಸಿಯಪ್ಪ.—ಆದುದರಿಂದ ಇದರ ತುರ್ತನ್ನು ತಿಳಿದು ಜಾಗ್ರತೆ ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಮುನಿಸಿಪಾಲಟಿಯವರು ಯಾವುದಾದರೂ ನಿರಿಯಾದ ಕಟ್ಟಡವನ್ನು ಕೊಟ್ಟ ಪಕ್ಷದಲ್ಲಿ ನಾವು ಕಾರ್ಯಕ್ರಮ ತೆಗೆದುಕೊಂಡು ಅಲ್ಲಿ ಹೆಂಗಸರ ಆಸ್ಪತ್ರೆಯ ಭಾಗವನ್ನು ತೆರೆಯಲು ಏರ್ಪಾಡು ಮಾಡುತ್ತೇವೆ.

Maternity Hospital at Chicknaikanahally.

Q.—573. **Sri C. H. LINGADEVARU** (Chicknaikanahalli).—

Will the Government be pleased to state :—

(*a*) whether the establishment of a Maternity Hospital at Chicknaikanahalli is not being urged both by the Municipal Council and the public from a long time;

(*b*) the steps taken in this behalf?

A.—**Sri T. CHANNIAH** (Minister for Public Health and Local Self-Government).—

(*a*) Yes.

(*b*) The question of opening a Maternity Hospital at Chicknaikanahalli is pending for want of suitable buildings for the hospital and quarters for the staff.